ಸಮಾಧಾನಕರವಾಗಿ ಬರುತ್ತಿರಲಿಲ್ಲ. ಹೀಗಾಗಿ ಸಮಾಧಿಯನ್ನು ಅಲ್ಲಿಂದ ಎತ್ತಲೇ ಬೇಕಾದುದು ಅನಿವಾರ್ಯ ಎಂದಾಯಿತು. ಆದರೆ ಹಿಂದಿನ ಬಾರಿ ಮಾಡಿದಂತೆ ಸಮಾಧಿಯನ್ನು ಸಮಾಧಿ ಮಾಡಲು ಇಲ್ಲಿ ಸಾಧ್ಯವಿರಲಿಲ್ಲ. ಊರಲ್ಲಿ ನಾಲ್ಕೈದು ಬಿಸನೆಸ್ಸು, ಸಮಾಜಸೇವೆ, ಸಣ್ಣಪುಟ್ಟ ರೌಡಿಸಂ ಮಾಡಿಕೊಂಡು ಸಾಕಷ್ಟು ಪ್ರಖ್ಯಾತನಾಗಿದ್ದ ದೊನ್ನೆಚಂದ್ರು ಸಮಾಧಿಯ ತಂಟೆಗೆ ಹೋದದ್ದು ಗೊತ್ತಾದರೆ ಸುಮ್ಮನಿರುವ ಪ್ರಮೇಯವೇ ಇರಲಿಲ್ಲ. ಹಾಗೂ ಮುಂದಿನ ವರ್ಷ ಆತ ಪೂಜೆಗೆ ಬಂದಾಗ ಸಮಾಧಿಯೇ ಇಲ್ಲದಿದ್ದರೆ ಹೇಗೆ?

ಹೀಗಾಗಿ ಸಮಾಧಿಯನ್ನು ಇರುವ ಜಾಗದಲ್ಲೇ ಮುಚ್ಚಿಹಾಕಿ, ಹದಿನೈದಿಪ್ಪತ್ತು ಮೀಟರುಗಳ ದೂರ ಥೇಟ್ ಅಂಥದ್ದೇ ಇನ್ನೊಂದು ಕಟ್ಟುವುದೆಂದು ನಿರ್ಣಯವಾಯ್ತು. ಈ ಸಮಾಧಿಯ ಗ್ರಾನೈಟ್ ಹಾಸುಗಳನ್ನೇ ಸಾಧ್ಯವಾದಷ್ಟೂ ಹೊಸದಕ್ಕೆ ಬಳಸುವುದೆಂದಾಯ್ತು. ಅಷ್ಟು ದೊಡ್ಡ ಜಮೀನಿನಲ್ಲಿ ಸಮಾಧಿಯ ಸ್ಥಳ ಬದಲಾದರೆ ದೊನ್ನೆಚಂದ್ರುವಿಗೆ ಯಾವುದೇ ಸಂಶಯ ಬರುವ ಸಾಧ್ಯತೆಯೂ ಇರಲಿಲ್ಲ. ಈ ರಹಸ್ಯ ಕಾರ್ಯಾಚರಣೆಯ ಹೊಣೆ ಕೂಡಾ ಶಿವುವಿನ ಮೇಲೇ ಬಿತ್ತು. ಕಂಪನಿಯಲ್ಲಿ ಸಾಕಷ್ಟು ಎಂಜಿನಿಯರುಗಳು, ಪ್ರಾಜಕ್ಟ್ ಮ್ಯಾನೇಜರುಗಳಿದ್ದರೂ ಇಂಥಾ ಕೆಲಸಗಳೆಲ್ಲಾ ಶಿವುವಿನ ಪಾಲೇ.

ಈ ಬಾರಿಯಂತೂ ಕೆಲಸ ಭಾರೀ ಕಷ್ಟಕರವಾಗಿತ್ತು. ನೆಲದಡಿಯಲ್ಲಿದ್ದ ನೀರಿನ ಪೈಪು ಒಡೆದು ಹೋದದ್ದೂ, ಸಮಾಧಿಯ ಪಕ್ಕದಲ್ಲೇ ಇದ್ದ ಮರದಲ್ಲಿ ಕಟ್ಟಿರುವ ಜೇನುಗಳು ದಾಳಿಮಾಡಿದ್ದು ಎಲ್ಲವೂ ಅನಿರೀಕ್ಷಿತವಾಗಿತ್ತು. ಇವರೆಲ್ಲ ಪ್ಲಾಸ್ಟಿಕ್ ಟಾರ್ಪಾಲು ಹೊದ್ದು, ಜೇನುಗಳಿಗೆ ಬೆಂಕಿಯಿಟ್ಟು ಓಡಿಸಿ ಕೆಲಸ ಮುಗಿಸುವಷ್ಟರಲ್ಲಿ ಬೆಳಗಾಗಿತ್ತು. ಅಂತಿಮವಾಗಿ ಹೊಸ ಜಾಗದಲ್ಲಿ ಅದೇ ತೆರನಾದ ಸಮಾಧಿ ಎದ್ದಿತ್ತು. ಅದರ ಸುತ್ತ ಹುಲ್ಲು ಹಾಸು, ಹೂವಿನ ಗಿಡಗಳನ್ನು ಬೆಳೆಸಿ ಅದನ್ನು ಲ್ಯಾಂಡ್‌ಸ್ಕೇಪಿನ ಭಾಗವನ್ನಾಗಿಯೂ ಮಾಡಲಾಯಿತು. ಈ ವಿಷಯ ಕಂಪನಿಯಲ್ಲೂ ಯಾರಿಗೂ ತಿಳಿಯದಂತೆ ಗುಟ್ಟಾಗಿ ಇಡಲಾಗಿತ್ತಾದರೂ ಸಂಬಂಧಿತ ಅನೇಕರಿಗೆ ಗೊತ್ತೇ ಇತ್ತು. ಇಷ್ಟೆಲ್ಲಾ ಆದಮೇಲೂ ಶಿವರಾಜ ಸಮಾಧಿ ಶಿವು ಆಗದೇ 'ಶಿವ್' ಆಗಲಾದರೂ ಹೇಗೆ ಸಾಧ್ಯವಾದೀತು?

★★★

ಶಿವುನ ಜಾಬ್ ಪ್ರೊಫೈಲ್ ಕೂಡಾ ಈಗ ಕಂಪನಿಯಲ್ಲಿ ಸಾಕಷ್ಟು ಬದಲಾಗಿದೆ. ಜೇಕೆ ಸರ್ ಹೊರತಾಗಿ ಆತ ಮತ್ತಾರಿಗೂ ಚಹ ತಂದುಕೊಡುವುದಿಲ್ಲ. ಅತೀ ಅನಿವಾರ್ಯವೆಂದಾದಾಗ, ಅದೂ ಕಂಪನಿಯ ಹಿರಿಯ ಅಧಿಕಾರಿಗಳಿಗೆ ಚಹ ನೀಡುತ್ತಾನೆ ಅಷ್ಟೇ. ಹೊರತುಪಡಿಸಿದರೆ ಆತನ ಸರ್ವಿಸ್ ಏನೇ ಇದ್ದರೂ ಜೇಕೆ ಸರ್‌ಗೆ ಮಾತ್ರ ಸೀಮಿತ. ಒಂದಿಷ್ಟು ಡಾಕ್ಯುಮೆಂಟೇಷನ್ ಕೆಲಸವನ್ನೂ ಮಾಡುತ್ತಾನೆ. ದಿನದಲ್ಲಿ ಇಂತಿಷ್ಟು ಹೊತ್ತು ಕಂಪ್ಯೂಟರಿನ ಮುಂದೆ ಕೂರುವ ಭಾಗ್ಯವೂ ಲಭಿಸಿದೆ... ಇತ್ಯಾದಿ.

ಹೀಗೊಂದು ದಿನ ಆಫೀಸಿನ ಏಸಿ ಡಕ್ಟಿನಲ್ಲಿ ಪಾರಿವಾಳವೊಂದು ಹೇಗೋ ಒಳಬಂದು ಸಿಕ್ಕಿಹಾಕಿಕೊಂಡಿತು. ಶಿವು ಆ್ಯಂಡ್ ಟೀಮ್ ಅದನ್ನು ಹರಸಾಹಸ ಮಾಡಿ ಹೊರತೆಗೆಯುವಷ್ಟರಲ್ಲಿ ಅದು ಪ್ರಾಣ ಬಿಟ್ಟಿತು. ಅದನ್ನು ಕಸದ ತೊಟ್ಟಿಗೆ ಎಸೆದು ಬರುವ ತಯಾರಿಯಲ್ಲಿದ್ದಾಗ, ವಿಷಯ ತಿಳಿದ ಜೇಕೆ ಶಿವುವನ್ನು ಕರೆದು, ಪಾರಿವಾಳವನ್ನು ಉತ್ತರಹಳ್ಳಿ ರಸ್ತೆಯಲ್ಲಿರುವ ಪ್ರಾಣಿಗಳ ಸ್ಮಶಾನದಲ್ಲಿ ಮಣ್ಣು ಮಾಡಿ ಬರುವಂತೆ ತಿಳಿಸಿದರು. ಅದಕಾಗುವ ವೆಚ್ಚ ಮೂರು ಸಾವಿರ ರೂಪಾಯಿಯನ್ನೂ ಕೊಟ್ಟರು.

ಇದು ತುಂಬಾ ಅತಿಯಾಯಿತು ಎಂದೆನಿಸಿತು ಅರವಿಂದನಿಗೆ. ಆದಷ್ಟೂ ಅಸಹನೆಯನ್ನು ನುಂಗಿಕೊಳ್ಳುವ ಆತನಿಗೆ ಇದನ್ನು ಹತ್ತಿಕ್ಕಿಕೊಳ್ಳಲಾಗಲಿಲ್ಲ. ಪಾರಿವಾಳದ ಅಂತ್ಯಕ್ರಿಯೆ ಮುಗಿಸಿ